# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C.C.No. 80 /2022

| | | |
|---|---|---|
| **ಹೆಸರುಃ** | ಸವಿತ | CW-3 |
| **ತಂದೆ/ಗಂಡ ಹೆಸರುಃ** | ಮೋಹನ್ | PW-3 |
| **ವಯಸ್ಸು** | 38 ವರ್ಷ | |
| **ವೃತ್ತಿ** | ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ ಸಾಮಾಜಿಕ ಕಾರ್ಯಕರ್ತೆ | |
| **ವಿಳಾಸಃ** | ಭುವನಹಳ್ಳಿ | **ದಿನಾಂಕಃ 13-09-2023** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎ ಪಿ ಪಿ ಯವರಿಂದ

ನಾನು ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ ಹಾಸನ ಇಲ್ಲಿ ಸಾಮಾಜಿಕ ಕಾರ್ಯಕರ್ತೆಯಾಗಿ 11 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ.

ಬಾಲ್ಯ ವಿವಾಹದ ಬಗ್ಗೆ ದೂರುಗಳು ಬಂದಲ್ಲಿ ಅವುಗಳನ್ನು ಅಟೆಂಡ್ ಮಾಡುವುದು ಮತ್ತು ಬಾಲ್ಯ ವಿವಾಹದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ನಿರ್ವಹಿಸುತ್ತಿರುತ್ತೇನೆ.

ದಿಃ 28-06-2021 ರಂದು ಬೆಳಗ್ಗೆ 10 ಗಂಟೆ ಸಮಯದಲ್ಲಿ 1098 ಕ್ಕೆ ಕರೆ ಮಾಡಿ ಹಾನುಬಾಳು ಹೋಬಳಿ, ಹಿರುದಿ ಗ್ರಾಮದಲ್ಲಿ ಆನಂದ ಎಂಬುವರ ಮಗ ಸುನೀಲ್ ಎಂಬುವರು ಲಾವಣ್ಯ ಎಂಬ 15 ವರ್ಷದ ಬಾಲಕಿಯನ್ನು ಬಾಲ್ಯ ವಿವಾಹ ಆಗಿದ್ದಾರೆ ಎಂದು ಮಾಹಿತಿ ಬಂದಿದ್ದು, ಆ ದೂರಿನ ಮೇರೆಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿ ಆ ಸಿಬ್ಬಂದಿಗಳ ಜೊತೆ ನಾವು ಸಕಲೇಶಪುರ ಶಿಶು ಅಭಿವೃದ್ಧಿ ಕಛೇರಿಗೆ ಬಂದು ನನಗೆ ವಿಷಯ ತಿಳಿಸಿ ನಂತರ ಗ್ರಾಮಾಂತರ ಠಾಣೆ ಸಕಲೇಶಪುರ ಇವರಿಗೆ ಮಾಹಿತಿ ನೀಡಿ ನಾವು 1 ನೇ ಆರೋಪಿ ಮನೆಗೆ ಹೋಗಿರುತ್ತೇವೆ. ಅಲ್ಲಿ ಲಾವಣ್ಯ ಎಂಬ ಮಗುವಿಗೆ ಬಾಲ್ಯ ವಿವಾಹ ಆಗಿರುವುದು ಕಂಡುಬಂದ ಮೇರೆಗೆ ಸದರಿ ವಿಚಾರವನ್ನು ಚಾಸಾ-1 ರವರಿಗೆ ತಿಳಿಸಿ ಅವರ ಆದೇಶದ ಮೇರೆಗೆ ತೆರೆದ ತಂಗುದಾಣ ಪಾಲನೆ ಪೋಷಣೆಗೆ ಬಿಟ್ಟಿರುತ್ತೇವೆ. ನಂತರ ಚಾಸಾ-1 ರವರು ಲಾವಣ್ಯ ಬಾಲ್ಯ ವಿವಾಹ ಆಗಿರುವ ಬಗ್ಗೆ ಒಪ್ಪಿಕೊಂಡಿರುವುದರಿಂದ ಪ್ರಕರಣವನ್ನು

ದಾಖಲು ಮಾಡುವಂತೆ ತಿಳಿಸಿರುತ್ತಾರೆ. 1 ನೇ ಆರೋಪಿ ಮತ್ತು ಚಾಸಾ-2 ರವರನ್ನು ನೋಡಿದಲ್ಲಿ ಗುರುತಿಸುತ್ತೇನೆ. ನಾನು ಪೋಲೀಸ್ ನವರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಎನ್ ಎಸ್ ವಕೀಲರಿಂದ**

ನನ್ನ ಸಮಕ್ಷಮ ಚಾಸಾ-2 ಮತ್ತು ಅವರ ಮನೆಯವರು ಅಥವಾ ಆರೋಪಿ ಮತ್ತು ಅವರ ಮನೆಯವರು ಬಾಲ್ಯ ವಿವಾಹ ಆದ ಬಗ್ಗೆ ಒಪ್ಪಿಕೊಂಡಿರುವುದಿಲ್ಲ. ನಾವು ಚಾಸಾ-2 ರವರ ಬಾಲ್ಯ ವಿವಾಹ ಆಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಸಂಗ್ರಹಿಸಿರುವುದಿಲ್ಲ ಎಂದರೆ ಸರಿ. ನಮ್ಮ ಹಿರಿಯ ಅಧಿಕಾರಿಗಳ ಆದೇಶದ ಮೇರೆಗೆ ಚಾಸಾ-2 ರವರನ್ನು ಕರೆದುಕೊಂಡು ಹೋಗಿ ತೆರದ ರಕ್ಷಣಾ ಕೇಂದ್ರಕ್ಕೆ ಬಿಟ್ಟಿರುತ್ತೇವೆ ಎಂದರೆ ಸರಿ. ಅಲ್ಲಿ ಚಾಸಾ-2 ರವರಿಂದ ಏನು ಮಾಹಿತಿ ಸಂಗ್ರಹಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ನಾನು ನನ್ನ ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ ಎಂ ಎಫ್ ಸಿ,** ಸಕಲೇಶಪುರ